*'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಹೊಸ ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.*

ಲೇಖಕ ಹಿ.ಚಿ. ಬೋರಲಿಂಗಯ್ಯ ಜಾನಪದ ವಿದ್ವಾಂಸರು. ಅವರು ಇತ್ತೀಚೆಗೆ 'ಆನೆ ಕಾಡು' ಎಂಬ ಕಾದಂಬರಿಯನ್ನು ಪ್ರಕಟಿಸಿ ಓದುಗರಲ್ಲಿ ಕೊಂಚ ಅಚ್ಚರಿ ಹುಟ್ಟಿಸಿದ್ದಾರೆ. ಅಚ್ಚರಿ ಏಕೆಂದರೆ ಜಾನಪದ ಲೋಕದಲ್ಲಿ ದಣಿವರಿಯದೆ ಅಡ್ಡಾಡಿಕೊಂಡಿದ್ದ ಅವರು ಕಾದಂಬರಿಯೊಂದನ್ನು ಬರೆಯಬಹುದು ಎಂಬ ನಿರೀಕ್ಷೆ ಅನೇಕರಲ್ಲಿ ಇರಲಿಲ್ಲ. ಅವರ ದೀರ್ಘಕಾಲದ ಜನಪದ ಕ್ಷೇತ್ರಕಾರ್ಯವೇ ಇಂತಹದ್ದೊಂದು ಕಾದಂಬರಿಯ ಹುಟ್ಟಿಗೆ ಕಾರಣವಾಗಿದ್ದು ಕುತೂಹಲಕರವಾಗಿದೆ.

ಜೇನುಕುರುಬ ಸಮುದಾಯದ ಕುಟುಂಬವೊಂದು ಆಧುನಿಕ ಕಾಲದ ಪ್ರಗತಿಯ ಹೊಡೆತಕ್ಕೆ ಸಿಕ್ಕು ಅನುಭವಿಸುವ ಸಂಕಟದ ಕಥನವನ್ನು ಕಾಡಿನ ಬದುಕಿನ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಹಾಗೆಂದು ಇದು ಕಾಡಿನ ಬದುಕಿನ ರೋಮಾಂಚಕ, ರಮ್ಯ ಚಿತ್ರಣವಲ್ಲ. ಅಲ್ಲಿ ಬದುಕುತ್ತಿರುವ ಜೀವಿಗಳ ಮಾನವೀಯ ಚಿತ್ರಣವಾಗಿದೆ. ಕಾಡಿನಲ್ಲಿ ಬದುಕುತ್ತಿರುವ ಮುಗ್ಧ ಜೇನುಕುರುಬ ವ್ಯಕ್ತಿಗಳಿಗೂ ಅವರು ನೋಡಿಕೊಳ್ಳುವ ಆನೆಗಳಿಗೂ ಮತ್ತು ನಿಸರ್ಗಕ್ಕೂ ಯಾವುದೇ ಭಿನ್ನತೆಯಾಗಲೀ ವ್ಯತ್ಯಾಸವಾಗಲೀ ಇಲ್ಲ. ಎಲ್ಲರೂ ಸಹಜವಾಗಿ ಒಂದರೊಳಗೊಂದು ಬೆರೆತು ಜೀವಿಸುವ ಬದುಕು ಅಲ್ಲಿನದು. ಹಾಗಾಗಿ ಜೇನುಕುರುಬರ ಸೋಮ ಬೇರೆಯಲ್ಲ, ಅವನು ನೋಡಿಕೊಳ್ಳುತ್ತಿರುವ ಆನೆ ಮಾದ ಬೇರೆಯಲ್ಲ. ಒಟ್ಟಿಗೆ ಜೀವನ ಸಾಗಿಸುವ ಸಹಜೀವಿಗಳ ಸಹಯಾನ ಅವರದು. ಹಾಗಾಗಿ ಈ ಆನೆ ಮಾದ ಒಂದು ಪ್ರಮುಖ ಅಮಾನವ ಪಾತ್ರವಾಗಿ ಕಾದಂಬರಿಯಲ್ಲಿ ಸೇರಿಹೋಗಿದೆ.

ಜೇನುಕುರುಬರ ಕಾಡಿನ ಕುರಿತಾದ, ಆನೆಗಳ ಕುರಿತಾದ ಜ್ಞಾನ ಈಗಿನ ಜ್ಞಾನದ ಪರಿಭಾಷೆಯ ಹೊರಗಿನದು. ಅದೇ ಜ್ಞಾನ ಮೈಸೂರಿನ ದಸರಾ ಮೆರವಣಿಗೆಯ ಆನೆಗಳನ್ನು ಸಾಕುವಲ್ಲಿ, ಅವುಗಳಿಗೆ ತರಬೇತಿ ನೀಡುವಲ್ಲಿ ಉಪಯೋಗವಾಗುತ್ತದೆ. ಅವರ ಜ್ಞಾನ ಇಷ್ಟಕ್ಕೇ ಸೀಮಿತವಲ್ಲ. ಕಾಡಿನ ಸಕಲೆಂಟು ವಸ್ತು, ಪ್ರಾಣಿ, ಗಿಡಗಳ ಬಗ್ಗೆ ದೊಡ್ಡದೊಂದು ತಿಳಿವಳಿಕೆಯ ಭಂಡಾರವೇ ಅವರಲ್ಲಿದೆ. ಸೋಮ ಮತ್ತು ಅವನ ಅಪ್ಪ ದೊಡ್ಡಯ್ಯ ಅರಣ್ಯ ಇಲಾಖೆ 'ಕತ್ತಲೆ ಕಾನು' ಹಾಡಿಯಲ್ಲಿ ಅರಣ್ಯ ಇಲಾಖೆ ನಡೆಸುತ್ತಿರುವ ಆನೆ ಶಿಬಿರದಲ್ಲಿ ಆನೆಗಳ ತರಬೇತುದಾರರು. ಆ ಇಲಾಖೆಯ ಉದ್ಯೋಗಿಗಳು. ಅವರ ತರಬೇತಿ ಪಡೆದೇ ಮೈಸೂರು ದಸರಾದ ಮೆರವಣಿಗೆಯಲ್ಲಿ ಆನೆಗಳು ಭಾಗವಹಿಸುವುದು. ಹಾಗಾಗಿ ಆನೆಗಳು ಈ ಜೇನುಕುರುಬ ತರಬೇತುದಾರರ ಮನೆ ಮಕ್ಕಳಂತೆಯೇ ಇರುತ್ತವೆ. ಇದು ಕಾದಂಬರಿಯ ಹಿನ್ನೆಲೆ ಮಾತ್ರ. ಇದರೊಂದಿಗೆ ಜೇನುಕುರುಬರ ಅತಂತ್ರಸ್ಥಿತಿ, ಕಾಡಿನ ಮೇಲೆ ನಿತ್ಯ ಆಗುವ ದುರಾಕ್ರಮಣಗಳು, ಅದರ ವಿರುದ್ಧ ಹೋರಾಡುವ ಅರಣ್ಯ ಅಧಿಕಾರಿ, ಮತ್ತವನ ಸಾವು. ಅವನ ಜಾಗಕ್ಕೆ ಬರುವ ದುಷ್ಟ ಅರಣ್ಯ ಅಧಿಕಾರಿ – ಹೀಗೆ ಕಾದಂಬರಿಯಲ್ಲಿ ಕಾಗದದಿಂದ ಬೇರೆ ಮಾಡಲಾಗದ ಅಕ್ಷರಗಳಂತೆ ಅನೇಕ ಎಳೆಗಳು ಸೇರಿಕೊಂಡಿವೆ. ಇದರಲ್ಲಿ ಆನೆಗಳನ್ನು ದಂತಕ್ಕಾಗಿ ಕೊಲ್ಲುವ ಹಂತಕರೂ ಅವರಿಗೆ ಸಾಥ್ ಕೊಡುವ ದುಷ್ಟ ಗ್ಯಾಂಗೂ ಸೇರಿಕೊಂಡು ಕಾದಂಬರಿಗೆ ಬೇರೆ ಆಯಾಮವೂ ಕೂಡಿಕೊಳ್ಳುತ್ತದೆ. ಈ ದುಷ್ಟ ಗ್ಯಾಂಗಿನ